

ಕಾಲದಲ್ಲಿ ಸಾಮಾನ್ಯವಾಗಿ ಈ ಹಕ್ಕಿಯ ಧ್ವನಿಯನ್ನು ಕೇಳಲಷ್ಟೇ ಸಾಧ್ಯ.

ಗಂಡುಹೆಣ್ಣಿಗೆ ಗುರುತಿಸುವಂತಹ ವ್ಯತ್ಯಾಸಗಳಿಲ್ಲ. ನಾನು ಗಮನಿಸಿದಂತೆ ಇವು ಸಂಘ ಜೀವಿಗಳಲ್ಲ. ಸಂತಾನಾಭಿವೃದ್ಧಿ ಕಾಲದಲ್ಲಿ ಮಾತ್ರ ಅವುಗಳನ್ನು ಜೊತೆಯಲ್ಲಿ ಕಾಣಬಹುದು. ಉಳಿದ ದಿನಗಳಲ್ಲಿ ಒಂಟಿಯಾಗಿಯೇ ನೆಲಕೆರೆದು ಹುಳುಹುಪ್ಪಟೆಗಳನ್ನು ಕೆದಕಿ ತಿನ್ನುವುದರಲ್ಲಿ ಕಾಲಕಳೆಯುತ್ತವೆ.

ಈಚೆಗೆ, ನಮ್ಮ ಹಿತ್ತಲಿನಲ್ಲಿ ಎಂದಿನಂತೆ ಚಂದ್ರಮುಕುಟ ನೆಲ ಕೆದಕಿ ಹಿಡಿದ ಹುಳುವೊಂದನ್ನು ಕೊಕ್ಕಿನಲ್ಲಿ ಹಿಡಿದು ಹಾರಿ ಮನೆಯ ಸೂರಿನ ಸಂದಿನಲ್ಲಿ ನುಸುಳಿ ಅಂತರ್ಧಾನವಾಯ್ತು. ಹಕ್ಕಿಯೊಂದು ಕೊಕ್ಕಿನಲ್ಲಿ ಆಹಾರ ಹಿಡಿದು ಹಾರಿದಾಗ, ಪಕ್ಷಿ ಛಾಯಾಗ್ರಾಹಕರು ಅನುಭವಿಸುವ ರೋಮಾಂಚನವನ್ನು ನಾನೂ ಅನುಭವಿಸಿದೆ. ಆ ಪಕ್ಷಿ ಮನೆಯ ಸೂರಿನಲ್ಲಿ ಗೂಡುಮಾಡಿದ್ದು ದೃಢವಾದಂತೆ ಛಾಯಾಗ್ರಹಣದ ಪರಿಕರಗಳೊಂದಿಗೆ ತಯಾರಾದೆ.

ಹಿತ್ತಲಿನ ಮಾವಿನ ಮರದ ಕೆಳಗೆ ಬಟ್ಟೆಯ ಮರೆಯೊಂದನ್ನು ರಚಿಸಿ ಅದರ ಹಿಂದೆ ಅವಿತು ಕೂತೆ. ಅದು ಓಡಾಡುವ ದಾರಿಯಲ್ಲಿ ಕೂರಲೆಂದು ಕಡ್ಡಿಯ ಪರ್ಚೊಂದನ್ನು ನೆಟ್ಟೆ. ಪರ್ಚಿಟ್ಟ ಸ್ವಲ್ಪ ಹೊತ್ತಿನಲ್ಲೇ ಕೊಕ್ಕಿನಲ್ಲಿ ಹುಳುವೊಂದನ್ನು ಹಿಡಿದು ಬಂದು ಕೂತಿತು. ವಿವಿಧ ಭಂಗಿಗಳಲ್ಲಿ ಅದರ ಚಿತ್ರ ಸೆರೆಹಿಡಿಯತೊಡಗಿದೆ. ಅದು ನನ್ನೊಂದಿಗೆ ಎಷ್ಟು ಹೊಂದಿಕೊಂಡಿತು ಎಂದರೆ, ಮರೆಯಿಂದ ಹೊರಬಂದು ಸನಿಹ ತಲುಪಿದರೂ ಹಾರಿ ಹೋಗದಂತಾಯ್ತು.

ನೆಲಕುಟುಕ ಅಥವಾ ಚಂದ್ರಮುಕುಟ ಸಾಮಾನ್ಯವಾಗಿ ಬಂಡೆಗಳ ಸಂದು, ಮರದ ಪೊಟರೆ, ಗೋಡೆಗಳ ಬಿರುಕುಗಳಲ್ಲಿ ಗೂಡುಕಟ್ಟುತ್ತದೆ. ಇತರೆ ಹಕ್ಕಿಗಳಂತೆ ಗೂಡು ಕಟ್ಟುವ ಕಲೆಗಾರಿಕೆ ಇವಕ್ಕಿಲ್ಲ. ಆದರೆ, ಇರುವ ಸಂದನ್ನೇ ಅಚ್ಚುಕಟ್ಟು ಮಾಡಿ ಗೂಡು ನಿರ್ಮಿಸುತ್ತವೆ. ನಮ್ಮ ಮನೆಯ ಸೂರಿನಲ್ಲಿ ಮಾಡಿದ್ದೂ ಹೀಗೇನೆ. ಅಳಿಲು ಬಿಟ್ಟುಹೋದ ಮೆತ್ತನೆಯ ಸಿದ್ಧ ಗೂಡಿನಲ್ಲೇ ಮೊಟ್ಟೆಯಿಟ್ಟು ಮರಿಮಾಡಿತ್ತು. ಮೂರು ಮರಿಗಳಾಗಿದ್ದವು. ಸತತವಾಗಿ ಗಂಡೂ ಹೆಣ್ಣೂ ಸರದಿಯಂತೆ 21ರಿಂದ 22 ದಿನಗಳವರೆಗೆ ನಿರಂತರ ಊಡಿಸಿ, ಬೆಳೆಸಿ, ಹಾರಿಹೋದದ್ದು ಕಂಡು ರೋಮಾಂಚಿತನಾದೆ.

ಮೂರರಿಂದ ಆರು ಮೊಟ್ಟೆಗಳಿಡುವ ಇವುಗಳ ಆಹಾರ ಕ್ರಿಮಿಕೀಟಗಳು. ನಮ್ಮ ಮನೆಯಂಗಳದ ಹಕ್ಕಿಗಳು ಹೆಚ್ಚಿನ ಬಾರಿ ಜೇಡವನ್ನೇ ಸವಿಯುತ್ತಿದ್ದುದನ್ನು ಗಮನಿಸಿದೆ. ಬಹುಶಃ, ಅವುಗಳ ಮರಿಗಳ ಬೆಳವಣಿಗೆಗೆ ಪೂರಕ ಪ್ರೊಟೀನು ಜೇಡಗಳಿಂದ ದಕ್ಕುತ್ತಿರಬೇಕು. ಕೆಲವೊಮ್ಮೆ ಹಲ್ಲಿ, ಹಾವುರಾಣಿ ತಂದದ್ದನ್ನೂ ನೋಡಿದ್ದೇನೆ.

ಫೆಬ್ರುವರಿಯಿಂದ ಮೇ ತಿಂಗಳ ಅವಧಿ ಚಂದ್ರಮುಕುಟಗಳ ಸಂತಾನಾಭಿವೃದ್ಧಿ ಸಮಯ. ಸಾಮಾನ್ಯವಾಗಿ ಮೇಲ್ನೋಟಕ್ಕೆ ಅವುಗಳ ಗೂಡು ಕಾಣಿಸುವುದಿಲ್ಲ. ಹಾಗಾಗಿ ಚಂದ್ರಮುಕುಟಗಳಿಗೆ ಶತ್ರುಗಳ ಕಾಟ ಕಡಿಮೆ ಎನ್ನಬಹುದು. ■